ಶ್ರೀ ಟಿ. ಎಂ. ಮಂಜುನಾಥ.—ತಿಪಟೂರು ತಾಲ್ಲೂಕಿನಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ ಎಂದು ಕೇಳಿರುವುದಕ್ಕೆ ಯಾವ ತರಹ ನೇರವಾದ ಉತ್ತರವೂ ಕಂಡು ಬರುತ್ತಿಲ್ಲ. ಇದರ ಬಗ್ಗೆ ದಯವಿಟ್ಟು ಹೇಳುತ್ತಾರೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಮಂಜೂರಾತಿಯಾಗಿರತಕ್ಕದ್ದು ೨೨ ಟಿ. ಎಂ. ಸಿ. ನೀರನ್ನು ಒರಿಜಿನಲ್ ಪ್ರಾಜೆಕ್ಟ್ ಪ್ರಕಾರವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ. ಇದರ ಜೊತೆಗೆ ಬಲಭಾಗದ ನಾಲೆಯಿಂದ ೮ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದ್ದು, ಒಟ್ಟು ೩೦ ಟಿ. ಎಂ. ಸಿ ವರೆಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ೬೪ ಟಿ. ಎಂ. ಸಿ. ವರೆಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆವಾಗ ತಿಪಟೂರಿಗೆ ನೀರನ್ನು ಕೊಡಬಹುದು ಎನ್ನುವುದು ಅಭಿಪ್ರಾಯ. ಅದಕ್ಕೋಸ್ಕರ ಇದನ್ನೆಲ್ಲ ನಾವು ಪರಿಶೀಲನೆ ಮಾಡುತ್ತ ಇದ್ದೇವೆ. ಒಟ್ಟು ಎಷ್ಟು ನೀರನ್ನು ಪಡೆಯುತ್ತೇವೆ ಎನ್ನುವ ವಿಚಾರದಲ್ಲಿ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಆಗಿದೆ. ಆದು ಮುಂದೆ ಗೊತ್ತಾಗತಕ್ಕ ವಿಷಯ.

ಶ್ರೀ ಎಚ್. ಡಿ. ದೇವೇಗೌಡ.—೬೪ ಟಿ. ಎಂ. ಸಿ. ನೀರು ನಮಗೆ ಸಿಕುತ್ತದೆ ಎನ್ನುವ ನಂಬಿಕೆ ಇದೆಯೋ ? ಏಕೆಂದರೆ ಮಾಪನಕೆರೆ ಹತ್ತಿರ ಆಕ್ವಡೆಕ್ಟ್ ಕಟ್ಟುವುದನ್ನು ತಡೆ ಹಿಡಿದಿದ್ದಾರೆ ಒಂದು ಕಡೆ ಕೆಲಸವಾಗುವುದನ್ನು ನಿಲ್ಲಿಸಿ ಇನ್ನೊಂದು ಕಡೆ ೬೪ ಟಿ. ಎಂ. ಸಿ. ನೀರು ಬಂದರೆ ನೀರು ಕೊಡುವ ವಿಷಯವನ್ನು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ ಎಷ್ಟು ನೀರು ಸಿಕ್ಕುತ್ತದೆ ಎನ್ನುವುದಕ್ಕೆ ಆಧಾರವಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಒಂದು ಲಕ್ಷ ಎಕರೆಯಷ್ಟು ನೀರಾವರಿಯಾಗುತ್ತದೆ ಎಂದು ಪ್ಲಾನ್ ಮಾಡಿದ್ದೇವೆ. ೬೪ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು ಹೇರಳವಾಗಿ ಬಂದರೂ ಇಷ್ಟು ಬಂದ ರೀತಿಯಲ್ಲಿ ಕ್ರಾಪ್ ಇಟ್ಟುಕೊಂಡು ಮಾಡುವುದಕ್ಕೆ ಆಗುತ್ತದೆಯೇ? ನೀರು ಇಲ್ಲದಿರುವ ಕಡೆ, ಕಡಿಮೆ ನೀರು ಸಿಕ್ಕಿದರೂ ಕೂಡ ಮೊದಲ ಹಂತದಲ್ಲಿ ಸಂಪೂರ್ಣವಾಗಿ ಡ್ರೈ ಲ್ಯಾಂಡಿಗೆ ನೀರು ಕೊಡುವುದಕ್ಕೆ ಸಾಧ್ಯವಿದೆ ಎಂದು ಸರ್ಕಾರದ ಅಭಿಪ್ರಾಯ.

2-00 P.M.

SANCTION OF PENSION OF THE TEACHERS RETIRED PRIOR TO 1st NOVEMBEL 1956.

691. SRI B. SATHYANARAYANA SINGH (Hospet).—Will the Minister for Education be pleased to state :—

(*a*) whether retired teachers who retired after 1st November 1956 are being paid pension ;

(*b*) if so, whether the Government has any proposal to extend this pension benefit to those teachers who retired prior to 1956 ;

(*c*) if not, the reasons therefor ?

SRI A. R. BADARINARAYANA (Minister for Education).—

(*a*) Yes, in respect of Government teachers under Mysore Civil Service Rules while in respect of aided teachers who retired between 1st November 1956 and 31st March 1963 an *ad hoc* pension of Rs.40-00 per month including D A. and to those who retired on or after 1st April 1963, pension under Triple Benefit Scheme Rules.

(SRI A. R. BADRINARAYANA)

(*b*) The question of grant of some pension to those teachers in aided schools who retired prior to 1st November 1956, what the practice in the States of Tamilnad and Kerala is and whether those that retired prior to State Re-organisation are eligible for such concession is under consideration.

(*c*) Does not arise.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಸ್ವಾಮಿ, ೧ನೇ ನವಂಬರ್ ೧೯೫೬ ಮೇಲೆ ನಿವೃತ್ತಿ ಆದ ಅಧ್ಯಾಪಕರಿಗೆ ವಿಶ್ರಾಂತಿ ವೇತನ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ಬಳ್ಳಾರಿ ಜಿಲ್ಲೆ ೧ನೇ ಆಕ್ಟೋಬರ್ ೧೯೫೬ರಲ್ಲಿ ಮೈಸೂರು ರಾಜ್ಯಕ್ಕೆ ಸೇರಿತು, ಆದರಿಂದ ಅಲ್ಲಿಯ ಅಧ್ಯಾಪಕರಿಗೆ ವಿಶ್ರಾಂತಿ ವೇತನ ೧೯೫೬ರಿಂದ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಎ. ಆರ್. ಬದರಿನಾರಾಯಣ.—ಮದ್ರಾಸ್ ಮತ್ತು ಕೇರಳ ರಾಜ್ಯದಲ್ಲಿ ಯಾವ ರೀತಿ ಇದೆ ಎನ್ನುವುದನ್ನು ತಿಳಿದುಕೊಂಡು ನಿರ್ಧಾರ ಮಾಡುತ್ತೇವೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಮದ್ರಾಸ್ ರಾಜ್ಯದಲ್ಲಿ ಕೊಡುತ್ತಿದ್ದಾರೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎ. ಆರ್. ಬದರಿನಾರಾಯಣ್.—ಅದನ್ನು ವಿಚಾರ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ.

MADAM SPEAKER.—Question Hour is over.

QUESTIONS FOR ANSWERS ON THE DAY

(but not taken up)

IRRIGATION FACILITIES TO SOME PARTS OF CHITRADURGA DISTRICT FROM UPPER BHADRA PROJECT

180. SRI PATEL PAPA NAIK (Molakalmuru).—Will the Minister of State for Major Irrigation be pleased state :—

(*a*) the names of Districts and Taluks which come under the purview of Upper Bhadra Project;

(*b*) whether Government proposes to implement this Project;

(*c*) if so, the step taken by the Government in this behalf;

(*d*) the extent of land in Chitradurga District that would be provided with irrigation facilities by this Project;

(*e*) whether it has come to the notice of the Government that the famini in the areas of Chellakere Molakalmuru, Hiriyur, Hosadurga, Jagalur and other places in Chitradurga District would be permanently eradicated on account of this Project;